ಮಾಡಬೇಕಾದರೆ, ಆ ಬಗ್ಗೆ ಮುಖ್ಯ ನ್ಯಾಯಾಧೀಶರೊಡನೆ ಚರ್ಚೆ ಮಾಡಬೇಕಾಗುತ್ತದೆ. ಆ ರೀತಿ ಸ್ಪೆಷಲ್ ಬೆಂಚ್ ಅನ್ನು ಸರ್ಕಾರವೇ ಮಾಡುವುದಕ್ಕಾಗುವುದಿಲ್ಲ. ಹೈಕೋರ್ಟ್‌ನವರು ಮಾಡಬೇಕಾಗುತ್ತದೆ.

ಶ್ರೀ ಟಿ.ಬಿ.ಜಯಚಂದ್ರ:- ಒಂದು ತಿಂಗಳಿನಲ್ಲಿ ಮಾಡುತ್ತೇವೆ ಎಂದು ಹೇಳಿ ಬಿಡಿ.

ಶ್ರೀ ಸಿದ್ಧರಾಮಯ್ಯ:- ಸರ್ಕಾರವೇ ಮಾಡುವುದಾದರೆ ನಾನು ಆ ರೀತಿ ಒಂದು ತಿಂಗಳು ಅಥವಾ ಹದಿನೈದು ದಿವಸವಾಗುತ್ತದೆ ಎಂದು ಹೇಳಬಹುದು. ಈ ದಿಸೆಯಲ್ಲಿ ಪ್ರಾಮಾಣಿಕವಾದಂತಹ ಒಂದು ಪ್ರಯತ್ನವನ್ನು ಈ ಸರ್ಕಾರ ಮಾಡುತ್ತದೆ ಎನ್ನತಕ್ಕ ಭರವಸೆಯನ್ನು ನಾನು ಅವರಿಗೆ ಕೊಡಲಿಕ್ಕೆ ಬಯಸುತ್ತೇನೆ. ಯಾವುದೇ ರೀತಿಯ ಬಾಕಿ ಇರಲಿ, ಬಾಕಿಯಿರುವವರು ಎಷ್ಟೇ ದೊಡ್ಡವರಿದ್ದರೂ ಕೂಡ, ಬಾಕಿಯನ್ನು ಅತ್ಯಂತ ಕಟ್ಟುನಿಟ್ಟಾಗಿ ಮುಲಾಜಿಲ್ಲದೇ ವಸೂಲಿ ಮಾಡತಕ್ಕ ಕೆಲಸವನ್ನು ಈ ಸರ್ಕಾರ ಮಾಡುತ್ತದೆ ಎನ್ನತಕ್ಕ ಮಾತನ್ನು ತಮ್ಮ ಮೂಲಕ ನಾನು ಅವರಿಗೆ ತಿಳಿಸಬಯಸುತ್ತೇನೆ.

ಶ್ರೀ ವೈ.ರಾಮಕೃಷ್ಣ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರ ಕೊಡುವಾಗ ಅದರಲ್ಲಿ ಕಲೆಕ್ಟಬಲ್ ಡ್ಯೂಸ್ ಮತ್ತು ನಾನ್ ಕಲೆಕ್ಟಬಲ್ ಡ್ಯೂಸ್ ಎಂದು ಹೇಳಿದರು. ಕಲೆಕ್ಟಬಲ್ ಡ್ಯೂಸ್ ಎಷ್ಟು? ನಾನ್ ಕಲೆಕ್ಟಬಲ್ ಡ್ಯೂಸ್ ಎಷ್ಟು? ಎಂಬುದನ್ನು ಮಾನ್ಯ ಸಚಿವರು ಮೊದಲು ಹೇಳಬೇಕು. ಎರಡನೆಯದಾಗಿ, ಲ್ಯಾಂಡ್ ರೆವಿನ್ಯೂ ಕೋರ್ಟ್‌ನಲ್ಲಿ, ಆರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂ ಆಗಿ ವಸೂಲು ಮಾಡಬಹುದು ಎಂಬ ಪ್ರಾವಿಷನ್ ಇದ್ದರೂ ಕೂಡ ತಾವು ಏಕೆ ಆ ರಿಕೋರ್ಸ್ ಅನ್ನು ಉಪಯೋಗಿಸಿಕೊಂಡು coercive ಮೆಷರ್ಸ್‌ನಲ್ಲಿ ಈ ಹಣ ವಸೂಲಿ ಮಾಡುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡಲಿಲ್ಲ?

ಶ್ರೀ ಸಿದ್ಧರಾಮಯ್ಯ:- ಈಗ ಪ್ರಸ್ತುತ ಕಲೆಕ್ಟಬಲ್ ಆರಿಯರ್ಸ್ ಮತ್ತು ನಾನ್ ಕಲೆಕ್ಟಬಲ್ ಆರಿಯರ್ಸ್ ಫಿಗರ್ಸ್ ನನ್ನ ಹತ್ತಿರ ಇಲ್ಲ. ಆದರೆ ರೆವಿನ್ಯೂ ಅಧಿಕಾರಿಗಳ ಮೂಲಕ ವಸೂಲಿ ಮಾಡತಕ್ಕದ್ದನ್ನು ಅತ್ಯಂತ ಕಟ್ಟುನಿಟ್ಟಾಗಿ ವಸೂಲಿ ಮಾಡುತ್ತಿದ್ದೇವೆ. ಕೋರ್ಟ್‌ನಲ್ಲಿ ಸ್ಟೇ ಇರತಕ್ಕ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಮಾತ್ರ ನಾನು ಆ ಉತ್ತರವನ್ನು ಕೊಟ್ಟಿ. ಹೈಕೋರ್ಟ್‌ನಲ್ಲಿ ಸ್ಟೇ ಇರತಕ್ಕ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಸುಮಾರು 200 ಕೋಟಿ ರೂಪಾಯಿಗಳಿಗೂ ಹೆಚ್ಚಿನ ತೆರಿಗೆ ಬಾಕಿ ವಸೂಲಿ ಇರತಕ್ಕ ಪ್ರಕರಣಗಳು ಹೈಕೋರ್ಟ್‌ನಲ್ಲಿ ಸ್ಟೇ ಆಗಿವೆ. ಅದನ್ನು ವಸೂಲಿ ಮಾಡಲಿಕ್ಕೆ ಸರ್ಕಾರ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತದೆ.

ಅಧ್ಯಕ್ಷರು:- ಮಾನ್ಯ ಅಪ್ಪಚ್ಚು ರಂಜನ್‌ರವರೇ, ನಿಮ್ಮ ಪ್ರಶ್ನೆ ಸಂಖ್ಯೆ 213 (1781) ಉತ್ತರಿಸಬೇಕಾಗಿರುವ ಮಾನ್ಯ ಗೃಹ ಸಚಿವರು ಮೇಲ್ಮನೆಯಲ್ಲಿ ಇರುವಂತೆ ಕಾಣುತ್ತದೆ. ಅವರು ಸದನಕ್ಕೆ ಬಂದ ನಂತರ ನಿಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ.

ವಿಷಯ:- ಪ್ರಥಮ ದರ್ಜೆ ಹಾಗೂ ದ್ವಿತೀಯ ದರ್ಜೆ ಗುಮಾಸ್ತರ ನೇಮಕ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 214(1944)

ಶ್ರೀ ಅಯನೂರು ಮಂಜುನಾಥ (ಹೊಸನಗರ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ)ರಾಜ್ಯಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಳೆದ 5 ವರ್ಷಗಳಲ್ಲಿ ಪ್ರಥಮ ಹಾಗೂ ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆಗಳನ್ನು ಭರ್ತಿಮಾಡಲು ಜಾಹಿರಾತು ನೀಡಲಾಗಿತ್ತು?

ಆ) ಎಷ್ಟೆಷ್ಟು ಹುದ್ದೆಗಳಿಗೆ ಜಾಹಿರಾತು ನೀಡಲಾಗಿತ್ತು. ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿತ್ತು.

ಇ) ಈಗಾಗಲೇ ಹಲವಾರು ವರ್ಷಗಳಿಂದ ಜಾಹಿರಾತು ನೀಡದೆ, ನೇಮಕಾತಿ ಆಗದಿರುವುದರಿಂದ ವಯೋಮಿತಿ ಮೀರಿರುವ ಸಾವಿರಾರು ಯುವಕರು ನಿರುದ್ಯೋಗಿಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಹಾಗಿದ್ದಲ್ಲಿ ಯಾವಾಗ ನೇಮಕಾತಿ ನೀಡಲು ಜಾಹಿರಾತುಗೊಳಿಸಲಾಗುವುದು ನೇಮಕಾತಿ ಮಾಡುವಾಗ (ಎಲ್ಲಾವರ್ಗಗಳಿಗೂ) 10 ವರ್ಷಗಳ ವಯೋಮಿತಿ ಸಡಿಲಿಕೆ ನೀಡಲಾಗುವುದೆ ಈ ಬಗ್ಗೆ ಸರ್ಕಾರ ಕೂಡಲೆ ಕಾರ್ಯೋನ್ಮುಖವಾಗುವುದೆ?

ಉ) ಈ ಹುದ್ದೆಗಳು ಎಲ್ಲಾ ಇಲಾಖೆಗಳಲ್ಲಿ ಖಾಲಿ ಇರುವ ಸ್ಥಾನಗಳ ವಿವರವನ್ನು ನೀಡುವುದು ಮತ್ತು ಎಷ್ಟು ವರ್ಷಗಳಿಂದ ನೇಮಕ ಮಾಡದೇ ಇರುವ ಮಾಹಿತಿಯನ್ನು ಒದಗಿಸುವುದು.

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿಗಳು):-

ಅ) 1991 ಬ್ಯಾಕ್‌ಲಾಗ್ ಹುದ್ದೆಗಳು ಪ.ಜಾತಿ: ಪ.ಪಂಗಡದವರಿಗೆ ಮಾತ್ರ

ಪ್ರಥಮ ದರ್ಜೆ: ದ್ವಿತೀಯ ದರ್ಜೆ ಸಹಾಯಕರು ಸೇರಿದಂತೆ - 5-10-89

ಆ) 1991 ಬ್ಯಾಕ್‌ಲಾಗ್ ಹುದ್ದೆ (ಪ. ಜಾತಿ: ಪ.ಪಂಗಡದವರಿಗೆ ಮಾತ್ರ)

ಪ್ರಕಟಿಸಿದ ಖಾಲಿ ಹುದ್ದೆಗಳು	ನೇಮಕಾತಿ ಪ್ರಾಧಿಕಾರಗಳ ಬೇಡಿಕೆಯ ಮೇರೆಗೆ ಪರಿಷ್ಕರಿಸಿದ ಖಾಲಿ ಹುದ್ದೆಗಳ ಸಂಖ್ಯೆ	ಆಯ್ಕೆ ಮಾಡಿದ್ದು
ಪ್ರ.ದ.ಸಹಾಯಕರು		
87	102	102
ದ್ವಿ.ದ.ಸಹಾಯಕರು		
115	152	152

ಇ) ಹೌದು.

ಈ) ವಿವಿಧ ಇಲಾಖೆಗಳಿಗೆ ಅನ್ವಯವಾಗುವ ನಿಯಮಗಳನ್ವಯ ಅರ್ಹ ಅಭ್ಯರ್ಥಿಗಳನ್ನು ಇರುವ ರಿಕ್ತ ಸ್ಥಾನಗಳಲ್ಲಿ ನೇಮಕಾತಿ ಮಾಡಲು ಸರ್ಕಾರ ಪರಿಶೀಲಿಸುತ್ತಿದೆ. ನೇಮಕಾತಿ ಮಾಡುವಾಗ ಹತ್ತು ವರ್ಷಗಳ ವಯೋಮಿತಿ ಸಡಿಲಿಕೆ ಬಗ್ಗೆ ಯಾವ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ

ಉ) ರಿಕ್ತ ಸ್ಥಾನಗಳ ಬಗ್ಗೆ ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಿಗಳೇ ನಿಯಂತ್ರಿಸುವುದರಿಂದ ಕೇಂದ್ರೀಕೃತ ಮಾಹಿತಿ ಲಭ್ಯವಿರುವುದಿಲ್ಲ ಆವಶ್ಯವಿರುವೆಡೆಗಳಲ್ಲಿ ನೇಮಕಾತಿಗಳನ್ನು ಆಗಿಂದಾಗ್ಗೆ ಮಾಡಲಾಗಿದೆ.

ಶ್ರೀ ಆಯನೂರು ಮಂಜುನಾಥ:- ಸರ್ಕಾರದವರು ನಿರುದ್ಯೋಗಿ ಯುವಕರಿಗೆ ಕೆಲಸ ಕೊಡುವುದರ ಬಗ್ಗೆ ವಿಶೇಷ ಆದ್ಯತೆಯನ್ನು ಕೊಡುತ್ತೇವೆಂದು ಘೋಷಣೆ ಮಾಡಿದ್ದಾರೆ. ಆದರೆ ಈಗ

ನನಗೆ ಒದಗಿಸಿರುವ ಮಾಹಿತಿಯ ಪ್ರಕಾರ 1989ರಲ್ಲಿ ಕರ್ನಾಟಕ ಲೋಕ ಸೇವಾ ಆಯೋಗದವರು ಅರ್ಜಿಗಳನ್ನು ಕರೆದಿದ್ದರು. ತದನಂತರ ಇವತ್ತಿನವರೆಗೆ ಪದವೀಧರರಿಗೆ ಹಾಗೂ ಇತರರಿಗೆ ಉದ್ಯೋಗ ಕೊಡುವ ಸಲುವಾಗಿ ಯಾವುದೇ ಎಸ್.ಡಿ.ಸಿ, ಎಫ್.ಡಿ.ಸಿ. ಹುದ್ದೆಗಳನ್ನು ತುಂಬಲು ಸರ್ಕಾರದಿಂದ ಯಾವುದೇ ಆಹ್ವಾನ ಬಂದಿರುವುದಿಲ್ಲ. ಅದೇ ಸಂದರ್ಭದಲ್ಲಿ 31ನೇ ಡಿಸೆಂಬರ್ 1987ರಲ್ಲಿ ಸರ್ಕಾರ ಒಂದು ಗೆಜೆಟ್ ನೋಟಿಫಿಕೇಷನ್ ಹೊರಡಿಸಿ 1987ನೇ ಇಸವಿಗೆ ಅವರಿಗೆ 33 ವರ್ಷಗಳಾಗುವಷ್ಟರ ಮಟ್ಟಿಗೆ ಏಜ್ ರಿಲ್ಯಾಕ್ಷೇಷನ್ ಕೊಟ್ಟಿತ್ತು. ಆ ನಂತರ ಮತ್ತೆ ಆಗಿಲ್ಲ. ಈಗ 1995ನೇ ಇಸವಿಗೆ ಸುಮಾರು ಎಂಟು ವರ್ಷಗಳು ಕಾಲ ಅನಗತ್ಯ ಕಾಲವ್ಯಯವಾಗಿದೆ. ಸರ್ಕಾರ ಉದ್ಯೋಗವನ್ನು ಕೊಟ್ಟಿಲ್ಲ. ಆ ದೃಷ್ಟಿಯಿಂದ ಈಗ ಸರ್ಕಾರ, ತಾನು ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ ಅಷ್ಟು ಕಾಲ ಎಜ್ ರಿಲ್ಯಾಕ್ಷೇಷನ್ ಕೊಡುತ್ತದೆಯೋ ಎನ್ನುವ ಒಂದು ಪ್ರಶ್ನೆಯಿದೆ.

ಶ್ರೀ ಹೆಚ್.ಡಿ.ದೇವೇಗೌಡ:- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರತಕ್ಕಂಥ ಸಲಹೆ ತುಂಬಾ ಉತ್ತಮವಾದಂತ ಸಲಹೆ. ಈ ನಿರುದ್ಯೋಗಿಗಳನ್ನು 1989 ರಿಂದ ಅಥವಾ ಅದಕ್ಕೂ ಸ್ವಲ್ಪ ಪೂರ್ವದಲ್ಲಿ ಸರ್ಕಾರ ಅನುಪಯುಕ್ತ ವೆಚ್ಚವನ್ನು ಕಡಿಮೆ ಮಾಡಬೇಕೆನ್ನುವ ದೃಷ್ಟಿಯಿಂದ ಒಂದೇ ಇಲಾಖೆಯಲ್ಲಿ ಅಲ್ಲ ಹಲವಾರು ಇಲಾಖೆಗಳಲ್ಲಿ ಏನು ನೇಮಕ ಮಾಡಿಲ್ಲವೋ, ಅದರಿಂದ ಅನೇಕರಿಗೆ ಈಗ ವಯೋಮಿತಿ ಕಳೆದು ಹೋಗಿದೆ. ಈ ಕಾರಣದಿಂದ, ಸರ್ಕಾರ ಅವರ ವಯೋಮಿತಿಯನ್ನು ಹೆಚ್ಚು ಮಾಡಿ ಈ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಬೇಕೆನ್ನುವುದರ ಬಗ್ಗೆ ಈ ಸರ್ಕಾರದ ಇಚ್ಛೆ ಇದೆ. ಅದು ವೈದ್ಯಕೀಯ ಇಲಾಖೆಯಿರಬಹುದು, ಪೋಲಿಸ್ ಇಲಾಖೆಯಿರಬಹುದು, ಶಿಕ್ಷಣ ಇಲಾಖೆಯಿರಬಹುದು, ರೆವಿನ್ಯೂ ಸರ್ವೇಯರ್ಸ್ ಇರಬಹುದು ಹೀಗೆ ಅನೇಕ ಇಲಾಖೆಗಳಲ್ಲಿ ಸುಮಾರು 80 ಸಾವಿರಕ್ಕೂ ಹೆಚ್ಚು ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ನಿರ್ಣಯ ಮಾಡುತ್ತೇವೆಂಬ ಒಂದು ಮಾತನ್ನು ನಾವು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೇವು. ಈ 5 ವರ್ಷದ ಅವಧಿಯಲ್ಲಿ ಈ ಎಲ್ಲಾ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ, ಜೊತೆಗೆ ಎಜ್ ರಿಲ್ಯಾಕ್ಷೇಷನ್ ಕೊಡುವುದ್ಕೂ ಪ್ರಯತ್ನ ಮಾಡುತ್ತೇವೆ.

ಶ್ರೀ ಆಯನೂರು ಮಂಜುನಾಥ್:- ಮುಖ್ಯಮಂತ್ರಿಗಳಿಗೆ ಧನ್ಯವಾದಗಳು. ಆದರೆ ತಾವು ಹಂತಹಂತವಾಗಿ ಮಾಡುತ್ತೇವೆಂದು ಹೇಳಿದ್ದೀರಿ. ಅಂದರೆ ಈ ಹಂತ ಯಾವುದು? ಮೊದಲನೆ ಹಂತ ಯಾವಾಗ ಪ್ರಾರಂಭವಾಗುತ್ತದೆ? ಈಗಾಗಲೇ ಸಾಕಷ್ಟು ವಯೋಮಿತಿಯನ್ನು ತಡೆಯುತ್ತಿರುವುದರಿಂದ ಈ ಮೊದಲನೆ ಹಂತವನ್ನು ಯಾವಾಗ ಪ್ರಾರಂಭ ಮಾಡುತ್ತೀರೆಂದು ದಯಮಾಡಿ ಸ್ಪಷ್ಟೀಕರಿಸಬೇಕು.

ಶ್ರೀ ಹೆಚ್.ಡಿ.ದೇವೇಗೌಡ: ವಿವಿಧ ಶ್ರೇಣಿಗಳಿಗೆ ಒಂದೊಂದು ರೀತಿಯ ವಯೋಮಿತಿ ಇದೆ. ಪರಿಶಿಷ್ಟ ಜಾತಿಗೆ ಬೇರೆ, ಸಾಮಾನ್ಯ ವರ್ಗಕ್ಕೆ ಬೇರೆ, ಹಿಂದುಳಿದ ವರ್ಗದವರಿಗೆ ಬೇರೆ ಮತ್ತು ಹಿಂದುಳಿದ ವರ್ಗದಲ್ಲಿ ವಿಶೇಷ ಗ್ರೂಪ್‌ಗೆ ಬೇರೆ. ಹೀಗೆ ಈ ವಯೋಮಿತಿ ಒಂದೊಂದು ಶ್ರೇಣಿಗೆ ಒಂದೊಂದು ರೀತಿ ಇದೆ. ಆ ಮಕ್ಕಳಿಗೆ ಅನುಕೂಲವಾಗುವಂತ ರೀತಿಯಲ್ಲಿ ಪ್ರಪೋರ್ಷನೇಟ್ ಆಗಿ ಹೆಚ್ಚಿಸುತ್ತೇವೆ. ಇದು ಒಂದು. ಎರಡನೆಯದಾಗಿ, ಹಂತ ಹಂತವಾಗಿ ಎಂದರೆ ಈ ವರ್ಷ ಮೆಡಿಕಲ್ ಎಜುಕೇಷನ್‌ನಲ್ಲಿನ ವೈದ್ಯರುಗಳನ್ನೆಲ್ಲಾ ಭರ್ತಿ ಮಾಡುತ್ತೇವೆ, ಪಶುವೈದ್ಯಕೀಯ ಇಲಾಖೆಯಲ್ಲಿ ಖಾಲಿಯಿರುವ ವೈದ್ಯರುಗಳನ್ನೆಲ್ಲಾ ಭರ್ತಿ ಮಾಡುತ್ತೇವೆ, ನರ್ಸ್ ಆಯಾಗಳನ್ನೆಲ್ಲಾ ಭರ್ತಿ ಮಾಡುತ್ತೇವೆ ಹಾಗೂ ಪ್ರಾಥಮಿಕ ಶಿಕ್ಷಕರನ್ನು ಈ ವರ್ಷವೇ ಭರ್ತಿ ಮಾಡುತ್ತೇವೆ. 5 ವರ್ಷದಲ್ಲಿ ತುಂಬತಕ್ಕಂಥದ್ದನ್ನೆಲ್ಲಾ ನಾವು ಒಂದೇ ಸಾರಿ ಭರ್ತಿ ಮಾಡುವುದಕ್ಕೆ ಹೋಗುವುದಿಲ್ಲ. ನಾವು 5

ವರ್ಷಗಳಲ್ಲಿ ತುಂಬುತ್ತೇವೆಂದು ನಮ್ಮ ಪ್ರಣಾಳಿಕೆಯಲ್ಲಿ ಕೊಟ್ಟಿದ್ದೇವೆ. ಈಗ ಎಲ್ಲಿ ಅವಶ್ಯಕವಂದು ನಮಗೆ ಕಂಡುಬರುತ್ತಿದೆಯೋ ಅಂತಹವುಗಳನ್ನು ಈ ವರ್ಷ ಭರ್ತಿ ಮಾಡುವುದಕ್ಕೆ ನಿರ್ಣಯ ಮಾಡಿದ್ದೇವೆ.

ಶ್ರೀ ಆಯನೂರು ಮಂಜುನಾಥ್:- ಬಿ.ಎಡ್ ಆಗಿ ವಯೋಮಿತಿ ಮೀರಿದಂಥ ಬಹಳ ಜನ ಶಿಕ್ಷಕರಿದ್ದಾರೆ ಅವರಿಗೆ 35ವರ್ಷಗಳಾಗಿವೆ. ಅವರ ಬಗ್ಗೆ ಈ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ?

ಅಧ್ಯಕ್ಷರು:- ಅದು ಬೇರೆ ಪ್ರಶ್ನೆಯೇ ಆಗುತ್ತದೆ. ನೀವು ಪ್ರತ್ಯೇಕವಾಗಿ ನೋಟಿಸ್ ಕಳುಹಿಸಬೇಕು. ನೀವು ಏಕಾಏಕಿಯಾಗಿ ಶಿಕ್ಷಕರದು, ಲೈನ್‌ಮೆನ್‌ದು ಎಲ್ಲವನ್ನು ಕೇಳಿದರೆ ಉತ್ತರ ಕೊಡುವುದಕ್ಕೆ ಕಂಪ್ಯೂಟರ್ ಇದೆಯೇ?

ಶ್ರೀ ಆಯನೂರು ಮಂಜುನಾಥ್:- ನಮಗೆ ಕಳೆದ 15ದಿವಸಗಳಿಂದ ಮಾತನಾಡಲು ಅವಕಾಶ ಸಿಕ್ಕಿಲ್ಲ. ಸಿಕ್ಕಿರುವ ಈ ಒಂದು ಅವಕಾಶವನ್ನೇ ಉಪಯೋಗಿಸಿಕೊಂಡು ಹೇಳೋಣ ಎಂದು ಹೇಳುತ್ತಿದ್ದೇನೆ....

ಅಧ್ಯಕ್ಷರು:- ಇನ್ನು ಮುಂದೆ ಹಾಗೆ ಮಾಡಿಕೊಳ್ಳುವುದು ಬೇಡ. ಸಮಯ ಉಳಿಸಿಕೊಳ್ಳೋಣ.

ವಿಷಯ :- ಮಂಚನಬೆಲೆ ಜಲಾಶಯದ ನಿರಾಶ್ರಿತರು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 215 (2335)

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ):-ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ)ಮಂಚನಬೆಲೆ ಜಲಾಶಯ ನಿರ್ಮಾಣದಿಂದ ನಿರಾಶ್ರಿತರಾದ ಜನಕ್ಕೆ ಸರ್ಕಾರ ಯಾವ ಯಾವ ರೀತಿಯ ಪುನರ್‌ಸೌಕರ್ಯಗಳನ್ನು ಒದಗಿಸಲಾಗಿದೆ?

ಆ)ಈ ಜಲಾಶಯ ನಿರ್ಮಾಣದಿಂದ ನಿರಾಶ್ರಿತರಾದವರ ಹೆಸರು ಮತ್ತು ವಿಳಾಸವನ್ನು ಒದಗಿಸುವುದು

ಇ)ಈ ನಿರಾಶ್ರಿತರಿಗೆ ಒದಗಿಸಲಾಗಿರುವ ಸೌಕರ್ಯಗಳನ್ನೆಲ್ಲಾ ಸಂಪೂರ್ಣವಾಗಿ ಒದಗಿಸಲಾಗಿದೆಯೇ?

ಈ) ಹಾಗಿದ್ದಲ್ಲಿ ಶೀಘ್ರವೇ ಒದಗಿಸಬೇಕಾಗಿರುವ ಸೌಕರ್ಯಗಳನ್ನೆಲ್ಲಾ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯಮಂತ್ರಿಗಳು):-

ಅ) ಮಂಚನಬೆಲೆ ಜಲಾಶಯದಿಂದ ನಿರಾಶ್ರಿತರಾದ ಜನರಿಗೆ ನಿವೇಶನಗಳು, ವ್ಯವಸಾಯಕ್ಕೆ ಜಮೀನು ನಾಗರೀಕ ಸೌಲಭ್ಯಗಳಾದ ಕುಡಿಯುವ ನೀರು (ಕೊಳವೆ ಭಾವಿ) ವಿದ್ಯುಚ್ಛಕ್ತಿ, ಶಾಲಾ ಕಟ್ಟಡ, ಸಮುದಾಯ ಭವನ, ದೇವಸ್ಥಾನ ಮತ್ತು ರಸ್ತೆ ನಿರ್ಮಾಣ ಇತ್ಯಾದಿಗಳನ್ನು ಒದಗಿಸಲಾಗಿದೆ.

ಆ) ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಇ) ಎಲ್ಲಾ ಸೌಕರ್ಯಗಳನ್ನು ಸಂಪೂರ್ಣವಾಗಿ ಒದಗಿಸಲಾಗಿದೆ.

ಈ) (ಇ) ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.